
ಜನಪ್ರಿಯ ಕಲಾಮಾಲಿಕೆ

ಸರ್ರಿಯಲಿಸಂ



ಎನ್. ಮರಿಶಾಮಾಚಾರ್

ಕರ್ನಾಟಕ ಲಲಿತಕಲಾ ಅಕಾಡೆಮಿ

ಸರ್ರಿಯಲಿಸಂ

ಎನ್. ಮರಿಶಾಮಾಚಾರ್

ಕರ್ನಾಟಕ ಲಲಿತಕಲಾ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು-560 002

SURREALISM *by N. Marishamachar*
Published by K. Mukundan, Registrar
Karnataka Lalithakala Academy
Nrupatunga Road, Bangalore-560 002

First Impression : 1995

ಬೆಲೆ : ರೂ. 5-00

ಮುಖಚಿತ್ರ : **ಸಾಲ್ವಡಾರ್ ಡಾಲಿ**

ಸಂಪಾದಕರು : **ಎಚ್. ಎ. ಅನಿಲಕುಮಾರ್**

ಮುದ್ರಣ
ಲಕ್ಷ್ಮಿ ಮುದ್ರಣಾಲಯ
ಚಾಮರಾಜಪೇಟೆ, ಬೆಂಗಳೂರು-18
ದೂರವಾಣಿ: 6618752, 6613123

ಒಂದು ಮಾತು

ಕರ್ನಾಟಕ ಲಲಿತಕಲಾ ಅಕಾಡೆಮಿಯು ಇದುವರೆಗೆ ಕಲೆ ಮತ್ತು ಕಲಾವಿದರಿಗೆ ಸಂಬಂಧಿಸಿದಂತೆ ಅನೇಕ ಪುಸ್ತಕಗಳನ್ನು ಪ್ರಕಟಿಸುತ್ತಾ ಬಂದಿದೆ. ಪ್ರಸ್ತುತ ಅಕಾಡೆಮಿಯು ಜನಪ್ರಿಯ ಕಲಾ ಮಾಲಿಕೆಯಡಿಯಲ್ಲಿ ಸುಲಭ ದರದಲ್ಲಿ ಜನಸಾಮಾನ್ಯರಿಗೂ ಕಲೆಯು ಅರ್ಥವಾಗಲಿ ಎಂಬ ಉದ್ದೇಶದಿಂದ ದೃಶ್ಯಕಲೆ, ಕಲೆಯ ರಸಸ್ವಾದನೆ, ಕಲಾ ಪಂಥಗಳು ಈ ವಿಷಯವಾಗಿ ಕಿರು ಪುಸ್ತಕಗಳನ್ನು ಹೊರತರುತ್ತಿದೆ.

ಈ ಮಾಲಿಕೆಯ ಪುಸ್ತಕಗಳನ್ನು ಓದುವುದರಿಂದ ಜನಸಾಮಾನ್ಯರಲ್ಲಿ ಕಲಾ ಇತಿಹಾಸವನ್ನು ಪರಿಚಯಿಸುತ್ತಾ ಕಲಾಕೃತಿಯನ್ನು ನೋಡಿ, ಗ್ರಹಿಸಿ, ರಸಸ್ವಾದನೆ ಮಾಡಿ ಗುಣ ಮೌಲ್ಯಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಹೊಂದಿ ಉತ್ತಮ ಗುಣ ಮೌಲ್ಯವುಳ್ಳ ಕಲಾಕೃತಿಯನ್ನು ಸಂಗ್ರಹಿಸುವಲ್ಲಿ ಆಸಕ್ತಿ ಮೂಡುತ್ತದೆಯೆಂಬ ಆಶಯ ನಮ್ಮದಾಗಿದೆ.

ಈ ಮಾಲಿಕೆಯಲ್ಲಿ ಪುಸ್ತಕಗಳನ್ನು ಚಿತ್ರಯಾತ್ರೆಯ ಸಂದರ್ಭದಲ್ಲಿ ಹೊರತರುತ್ತಿರುವುದು ಔಚಿತ್ಯಪೂರ್ಣವಾಗಿದೆ. ಚಿತ್ರಯಾತ್ರೆಯು ನಾಡಿನಾದ್ಯಂತ ಸಂಚರಿಸುವಾಗ ಎಲ್ಲಾ ಪುಸ್ತಕಗಳು ನಾಡಿನ ಮೂಲೆ ಮೂಲೆಗೂ ತಲುಪಬೇಕೆಂಬುದು ನಮ್ಮ ಉದ್ದೇಶವಾಗಿದೆ. ಈ ಮಾಲಿಕೆಯಲ್ಲಿ ಬರೆದಿರುವ ಲೇಖಕರೆಲ್ಲರೂ ಸಂಬಂಧಪಟ್ಟ ವಿಷಯದಲ್ಲಿ ಪರಿಣತರೇ ಆಗಿದ್ದಾರೆ. ನಮಗೆ ಅತ್ಯಂತ ಕಡಿಮೆ ಅವಧಿಯಲ್ಲಿ ಈ ಕಿರುಹೊತ್ತಿಗೆಗಳನ್ನು ಬರೆದುಕೊಟ್ಟ ಕಲಾ ಲೇಖಕರಿಗೆ ಆಭಾರಿಯಾಗಿದ್ದೇವೆ. ನಮ್ಮ ಈ ಪ್ರಯತ್ನವನ್ನು ಕಲಾವಿದರೂ, ಕಲಾಸಕ್ತರೂ ತುಂಬು ಹೃದಯದಿಂದ ಸ್ವಾಗತಿಸಿ ಪ್ರೋತ್ಸಾಹಿಸುತ್ತಾರೆಂದು ನಂಬಿದ್ದೇವೆ.

ಸಿ. ಚಂದ್ರಶೇಖರ
ಅಧ್ಯಕ್ಷರು

ಸರ್‍ರಿಯಲಿಸಂ

ಇಪ್ಪತ್ತನೆಯ ಶತಮಾನದಲ್ಲಿ ವಿಶೇಷವಾಗಿ ಕಾಣಿಸಿಕೊಂಡ ಹೊಸ ಪ್ರವೃತ್ತಿಯನ್ನು ಸೂಚಿಸುವ ಕಲಾ ಪಂಥಗಳಲ್ಲಿ **ಸರ್‍ರಿಯಲಿಸಂ** ಪಂಥ ಮುಖ್ಯವಾದುದು, ಕಲಾವಿದನ ಊಹಾ ವಿಲಾಸಕ್ಕೆ, ವಿಚಾರ ಸರಣಿ, ಕನಸುಗಾರಿಕೆ ಮತ್ತು ಸುಪ್ತ ಭಾವನೆಗಳಿಗೆ ಇಲ್ಲಿ ಅವಕಾಶವಿದೆ. ಬುದ್ಧಿ ಪ್ರಚೋದಿತವಾದ ಅಥವಾ ಕೇವಲ ಸಾಂಪ್ರದಾಯಿಕವಾದ ವಿಚಾರಗಳನ್ನು ಅವಾಸ್ತವಿಕ ವಾತಾವರಣದಲ್ಲಿ ತಂದಿಟ್ಟು, ತೋರಿಸಿ, ಚಕಿತಗೊಳಿಸಬಹುದು; ವಿಚಾರಕ್ಕೆ ಗುರಿ ಮಾಡಬಹುದು. ಮಾನವನ ವಾಸ್ತವಿಕ ಅವಯವಗಳನ್ನು ಅವಾಸ್ತವಿಕವೂ ಭೀತಿಕಾರಕವೂ ಆಗಿ ತೋರಿಸಿರುವ ವಿಕೃತಿಗಳು ಸರ್‍ರಿಯಲಿಸಂ ಪಂಥದ ಹಿನ್ನೆಲೆ ಚಿತ್ರಕಾರನ ವ್ಯಕ್ತಿಗತ ಮನೋಧರ್ಮಕ್ಕೆ ಸಂಬಂಧಿಸಿರುತ್ತದೆ. ಕಲ್ಪನೆ ಮತ್ತು ಊಹೆಗಳಿಗೆ ಅದು ಸಂಬಂಧಪಟ್ಟಂತೆಯೇ ಆವರವರ ಸುಪ್ತ ಮನಸ್ಸಿಗೂ ಸಂಬಂಧಪಟ್ಟಿರುತ್ತದೆ. ಪ್ರಖ್ಯಾತ ಮನಶಾಸ್ತ್ರಜ್ಞ ಫ್ರಾಮಿಕ್ ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿರುವನು. ಸರ್‍ರಿಯಲಿಸಂ ಪಂಥ ಈ ಶತಮಾನದ ಅತ್ಯಂತ ಮಹತ್ವದ ಚಳುವಳಿಗಳಲ್ಲಿ ಒಂದಾಗಿದ್ದು, ಕಲಾವಿದರು, ಶಿಲ್ಪಿಗಳು, ಲೇಖಕರು ಚಲನಚಿತ್ರ ಕಲಾವಿದರು ಸಮಾನ ಮನೋಭಾವದಿಂದ ಪರಿಭಾವಿಸಿದ ವಿಶ್ವವೊಂದರ ಪರಿಶೋಧನೆಯನ್ನು ಪ್ರತಿಷ್ಠಾಪಿಸಲು ಪ್ರಯತ್ನಿಸಿತು.

ಸರ್‍ರಿಯಲಿಸಂ ಸದಾಕಾಲ ಅಂತರರಾಷ್ಟ್ರೀಯ ರೂಪುರೇಷೆ ಹೊಂದಿದ್ದರೂ ಕೂಡ, ಅದರ ಮೊದಲ ಬೆಳವಣಿಗೆ ಆದದ್ದು ಪ್ಯಾರಿಸಿನಲ್ಲಿ. ಅದು ಒಂದು ಉಪತಂಡವಾಗಿ, ಆಮೇಲೆ 1925ರ ನಂತರ ಬ್ರಸಲ್ಸ್‌ನಲ್ಲಿ ಬೇರೆ ಬೇರೆ ಸರ್‍ರಿಯಲ್ ತಂಡಗಳು ಹುಟ್ಟಿದ್ದು ಮತ್ತು ಅದರ ತತ್ವಗಳು ಎಲ್ಲೆಡೆ ಪ್ರಸಾರವಾದುದು 1930ರ ದಶಕದಲ್ಲಿ. ಇದಕ್ಕೆ ಕಾರಣ ಆಗ ನ್ಯೂಯಾರ್ಕ್, ಲಂಡನ್, ಟೋಕಿಯೋ, ಕೋಪನ್ ಹೇಗನ್, ಟೆನರಿಟ್ ಮತ್ತಿತರ ನಗರಗಳಲ್ಲಿ ನಡೆದ ಕಲಾಪ್ರದರ್ಶನಗಳು.

ಬ್ರಿಟನ್‌ನ ಮೊದಲ "ಮ್ಯಾನಿಫೆಸ್ಟೋ ಆಫ್ ಸರ್‍ರಿಯಲಿಸಂ" ಪುಸ್ತಕದ (1924) ಅಡಿ ಟಿಪ್ಪಣಿಯಲ್ಲಿ ಕಲೆಯ ಬಗ್ಗೆ ಉಲ್ಲೇಖಗೊಂಡಿದ್ದರೂ ಕೂಡ, ಅದು ಬಹಳ ಬೇಗ ಸರ್‍ರಿಯಲಿಸಂ ಭಾವನೆಗಳನ್ನು ವ್ಯಕ್ತಪಡಿಸಲು ಕೇಂದ್ರ ಬಿಂದುವಾಯಿತು. 1928ರಲ್ಲಿ ಬ್ರಿಟನ್‌ನ ಪ್ರಮುಖ ಪ್ರಬಂಧ "ಸರ್‍ರಿಯಲಿಸಂ

ಮತ್ತು ಚಿತ್ರರಚನೆ" ಪ್ರಕಟವಾಯಿತು. ಸರ್ರಿಯಲಿಸ್ಟ್ ಕಲಾ ಚಳುವಳಿಯಲ್ಲಿ ಒಂದಲ್ಲ ಒಂದು ಸಾರಿ ಭಾಗವಹಿಸಿದ ಕಲಾವಿದರಲ್ಲಿ ಹಳೆಯ 'ದಾದಾ'ಗಳಾಗಿದ್ದ ಜೀನ್ ಆರ್ಪ್, ಮ್ಯಾನ್‌ರೆ, ಫ್ರಾನ್ಸಿಸ್ ಪಿಕಾಬಿಯ ಮತ್ತು ಮ್ಯಾಕ್ಸ್ ಅರ್ನೆಸ್ಟ್ ಸೇರಿದ್ದರು. ಇವರ ಜೊತೆ ಮ್ಯಾಸನ್ ಜಾನ್ ಮಿರೋ, ಟಂಗ್ವೆ, ಮ್ಯಾಗ್ರಿಟ್, ಗಿಯಾಕೊಮಿತಿ, ಸಲ್ವಡಾರ್ ಡಾಲಿ, ಬ್ರಾನರ್, ಬೆಲ್ಮರ್, ಡೋಮಿನಿಗೆಸ್, ಮಟ್ಟಿ ಮತ್ತು ಲ್ಯಾಮ್ ಕೂಡ ಸೇರಿದ್ದರು. ಪಿಕಾಸೋ ಮತ್ತು ಡುಶ್ಯಾಂಪ್ ಸರ್ರಿಯಲಿಸಂನ ನಿಕಟವರ್ತಿಗಳಾಗಿದ್ದರು. ಮಾರ್ಕ್‌ಶಗಾಲ್ ಮತ್ತು ಪಾಲ್ ಕ್ಲೇ ಸರ್ರಿಯಲಿಂನ ಕೆಲವು ಮೂಲಭೂತ ಚಟುವಟಿಕೆಗಳನ್ನು ರೂಪಿಸಿಕೊಂಡಿದ್ದರು.

ಕಲೆ, ಕಲಾವಿದರಿಗೆ ಮತ್ತು ಕಲಾ ಪರಂಪರೆಗೆ ಸಂಬಂಧಪಟ್ಟ ಸರ್ರಿಯಲಿಸಂನ ಪ್ರಮುಖ ಅಂಶಗಳು ಮೂಲ ದಾದಯಿಸಂನಲ್ಲಿದ್ದರೂ ಕೂಡ, ಅದರ ಒತ್ತು ಬೇರೆಯೇ ಆಗಿತ್ತು. ಮಹಾನ್ ಕಲಾವಿದರ ಮತ್ತು ಕಲೆಯ ಅತ್ಯಂತ ಗೌರವಯುತ ಕಾಲಗಳನ್ನು ಶಪಿಸುವುದರಲ್ಲಿ ಅಥವಾ ತಮಾಷೆ ಮಾಡುವುದರಲ್ಲೇ 'ದಾದಾ'ಗಳು ತೃಪ್ತಿಪಟ್ಟುಕೊಳ್ಳುತ್ತಿದ್ದರು. ಆದರೆ ಸರ್ರಿಯಲಿಸ್ಟ್ ಕಲಾವಿದರು 'Classical traditions of the ideal of truth to nature' ಮತ್ತು 'ಕಲೆಗಾಗಿ ಕಲೆ' ಎಂಬ ನೀತಿಯನ್ನು (ಈ ಕಾರಣಕ್ಕಾಗಿ ಅಮೂರ್ತ ಕಲೆಯನ್ನು ಅವರು ಟೀಕಿಸುತ್ತಿದ್ದರು) ಸಕಾರಣಗಳಿಂದ ಮತ್ತು ಗಂಭೀರವಾಗಿ ಟೀಕಿಸುತ್ತಿದ್ದರು. ಇದರ ಜೊತೆ ಅವರಿಗೆ ಅತ್ಯಂತ ಪ್ರಿಯ ಮತ್ತು ಆಪ್ತವಾಗಿದ್ದ. ಇನ್ನೊಂದು ಕಲಾಪರಂಪರೆಗೆ ಜನರ ಗಮನವನ್ನು ಹರಿಸಲು ಯತ್ನಿಸಿದರು. ಈ ಕಲಾಪರಂಪರೆಯನ್ನು ಕಲಾ ಇತಿಹಾಸಕಾರರು ಮತ್ತು ಕಲಾ ತಜ್ಞರು ಕಡೆಗಣಿಸಿದ್ದರು. ಜನರ ಅಭಿರುಚಿಯನ್ನು ಸಂಪೂರ್ಣವಾಗಿ ಬದಲಾಯಿಸಲು ಮತ್ತು ಸರ್ರಿಯಲಿಸಂ ಭಾವನೆಗಳು ಮೊದಲಿನಿಂದಲೂ ಮನುಷ್ಯನ ಜಾಗ್ರತ ಭಾವನೆಯ ಒಂದು ಪ್ರಮುಖ ಭಾಗವಾಗಿತ್ತು ಎಂದು ತೋರಿಸುವ ಉದ್ದೇಶದಿಂದ ಅವರು ಯಾವ ಮುಚ್ಚು ಮರೆಯಿಲ್ಲದೆ ತಮ್ಮ ಕಲೆಯ ವಿವಿಧ ಮತ್ತು ವೈವಿಧ್ಯಮಯ ಮೂಲಗಳನ್ನು ಒಪ್ಪಿಕೊಳ್ಳುತ್ತಿದ್ದರು. ಇವರಲ್ಲಿ ಪ್ರಮುಖರಾಗಿದ್ದವರೆಂದರೆ ಫ್ಯಾಂಟಸಿ ಕಲಾವಿದರಾಗಿದ್ದ ಬೋಷ್(Bosch), ಉಚೆಲ್ಲೋ(Uccello) ಮತ್ತು ಆರ್ಕಿಂಬೊಲ್ಡೊ (Arcimboldo), ರೊಮ್ಯಾಂಟಿಕ್ ಮತ್ತು ಸಿಂಬಾಲಿಸ್ಟ್ ಕಲಾವಿದರು ಮತ್ತು ಲೇಖಕರಾಗಿದ್ದ ರಿಂಬಾಡ್(Rimbaud), ಲಾಟ್ರೆವಮಾಂಟ್ (Lautreamont), ಗೋಯಾ(Goya), ಮೋರೆ(Moreau), ಒಡಿಲಾನ್ ರೆಡಾನ್(Redon), ಸ್ಯೂರ(Seurat), ಗಾಗಿನ್(Gaugin) ಮತ್ತು ಹೆನ್ರಿರೂಸೊ(Rousseau)ನಂಥ 'ನಿಷ್ಕಪಟ' (Naive) ಕಲಾವಿದರು.

ಇದಲ್ಲದೆ ಅಸ್ವಸ್ಥ ಮನಸ್ಸಿನವರ ಕಲೆ, ಮಕ್ಕಳ ಕಲೆ, ಫೆಸಿಫಿಕ್ ನಡುಗಡ್ಡೆಗಳ, ಎಸ್ಕಿಮೋಗಳ ಹಾಗೂ ಅಮೆರಿಕನ್ ಇಂಡಿಯನ್ ಪ್ರಾಚೀನ ಜನಾಂಗಗಳ ಕಲೆ ಮತ್ತು ಪಿಕ್ಚರ್ ಪೋಸ್ಟ್ ಕಾರ್ಡ್‌ಗಳು ಹಾಗೂ ಮೂಕಿ ಹಾಸ್ಯ ಚಿತ್ರಗಳಲ್ಲಿ ಕಂಡು ಬರುತ್ತಿದ್ದ ವಿಚಿತ್ರವಾದ ಜನಪ್ರಿಯ ಕಲೆಯ ಸ್ವರೂಪಗಳು ಸೇರಿದ್ದವು. ಇವುಗಳ ಜೊತೆಗೆ ಸಿಗ್ಮಂಡ್ ಫ್ರಾಯ್ಡ್‌ನ ಬರಹಗಳು, ಅದರಲ್ಲೂ 'ದಿ ಇಂಟರ್‌ಪ್ರಿಟೇಶನ್ ಆಫ್ ಡ್ರೀಮ್ಸ್' 1920ರ ದಶಕದಲ್ಲಿ ಸರ್ರಿಯಲಿಸಂನ ಬೆಳವಣಿಗೆಗೆ ಪ್ರಮುಖ ಕಾರಣವಾಗಿದ್ದವು. ದಾದಾ ಚಿತ್ರಗಳನ್ನು ಬಿಟ್ಟರೆ, ಅತ್ಯಂತ ಹತ್ತಿರದ ದೃಶ್ಯ ಮೂಲಗಳೆಂದರೆ ಪಿಕಾಸೊನ ಕೆಲವು ಕ್ಯೂಬಿಸ್ಟ್ ಚಿತ್ರಗಳು, ದಾದಾದಿಂದ ಹೊರಗಿರುವ ಡ್ಯುಚಾಂಪ್‌ನ (Duchamp) ಚಿತ್ರಗಳು ಮತ್ತು ಡಿ ಚಿರಿಕೊನ (Chirico) ಮೆಟಫಿಸಿಕಲ್ ಚಿತ್ರಗಳು, 'ದಾದಾ'ದಿಂದ ಮುಕ್ತವಾದನಂತರದ ಎರಡು ವರ್ಷ ಕಾಲ (1922-24) ಸಿಗ್ಮಂಡ್ ಫ್ರಾಯ್ಡ್‌ನ ಪುಸ್ತಕಗಳನ್ನು ಆಧರಿಸಿದ ಕನಸುಗಳ ಅರ್ಥೈಸುವಿಕೆ ಮತ್ತು ಆಟೋಮ್ಯಾಟಿಸಂಗಳ ಬಗ್ಗೆ ತೀವ್ರವಾದ ಪ್ರಯೋಗಗಳನ್ನು ನಡೆಸಿದರು. ಈ ಅವಧಿಗೆ 'ಟ್ರಾನ್ಸಸ್ ಅವಧಿ' (Period of Trances) ಎಂಬ ಹೆಸರು ಬಂದಿತು. ಅಕ್ಟೋಬರ್ 1924ರಲ್ಲಿ ಪ್ರಕಟವಾದ ಮೊದಲ ಮ್ಯಾನಿಫೆಸ್ಟೋದಲ್ಲಿ ಈ ಗುಂಪಿನ ಈ ಮೇಲೆ ತಿಳಿಸಿದ ಚಟುವಟಿಕೆಗಳು, ಸಿದ್ಧಾಂತಗಳು ಮತ್ತು ಉದ್ದೇಶಗಳನ್ನು ಸಂಗ್ರಹಿಸಲಾಗಿದೆ. ಈ ಪುಸ್ತಕದಲ್ಲಿ ಆಂದ್ರೆ ಬ್ರೆತಾನ್ (Andrea Breton) ಬಹಳ ಶ್ರೇಷ್ಠಮಟ್ಟದಲ್ಲಿ ಸರ್ರಿಯಲಿಸಂನ್ನು ಈ ಕೆಳಗೆ ತಿಳಿಸಿರುವಂತೆ ವ್ಯಾಖ್ಯೆ ಮಾಡಿದ್ದಾನೆ:

ಭಾವನೆಗಳು ನಿಜವಾಗಿ ನಡೆಯುವ ರೀತಿಯನ್ನು ಒಬ್ಬ ವ್ಯಕ್ತಿ, ಶುದ್ಧ, ಅನಿಯಂತ್ರಿತ ಮನಸ್ಸಿನ ಶಕ್ತಿಯ ಮೂಲಕ ವ್ಯಕ್ತಪಡಿಸುವ ರೀತಿ, ಚಿಂತನ ಶಕ್ತಿಯ ಯಾವುದೇ ಹಿಡಿತವಿಲ್ಲದೆ, ಸೌಂದರ್ಯದ ಅಥವಾ ನೈತಿಕ ಹೊಣೆಗಾರಿಕೆಗಳಿಂದ ಸಂಪೂರ್ಣ ಮುಕ್ತವಾಗಿ ಅಪ್ರಜ್ಞ ಭಾವನೆಯೊಂದರಿಂದಲೇ ನಿರ್ದೇಶಿತವಾಗಿ, ಉತ್ತಮ ಮಟ್ಟದವು ಎಂದು ನಂಬಿಕೆಗೀಡಾಗಿರುವ, ಈ ಹಿಂದೆ ಕಡೆಗಣಿಸಿರುವ ಕೆಲವು ಮಾನಸಿಕ ಸಂಬಂಧಗಳು, ಕನಸುಗಳ ಸರ್ವವ್ಯಾಪಿ ಶಕ್ತಿ ಮತ್ತು ನಿರಾಸಕ್ತಿ ಭಾವನೆಗಳ ಮೆಲೆ ಸರ್ರಿಯಲಿಸಂ ಅವಲಂಬಿಸಿದೆ.


ಅರೆ ನಿದ್ರಾ ಸ್ಥಿತಿಯನ್ನು ತಲುಪಿದರೆ, ಹೊರ ಜಗತ್ತನ್ನು ಅಳಿಸಿ ಹಾಕಿ, ಚಿಂತನ ಶಕ್ತಿಯ ಅಡೆತಡೆಗಳಿಲ್ಲದೆ, ಶ್ರೇಷ್ಠ ಮಟ್ಟದ ನೈಜತೆಯ ಅದ್ಭುತ ಲೋಕದಲ್ಲಿ ನೆಲೆಸಬಹುದು. ಕನಸಿನ ಲೋಕಕ್ಕೆ ಸಮಾನವಾದ ಈ ಲೋಕ ನಮ್ಮ ಎಚ್ಚರಿತ ಮನಸ್ಸಿಗೆ ಎಂದೂ ದಕ್ಕುವುದಿಲ್ಲ ಎಂಬುದನ್ನು ಸರ್ರಿಯಲಿಸ್ಟ್‌ಗಳು ಕಂಡುಕೊಂಡರು. ಮಾತು, ಬರಹ, ಕಲೆ, ಚಿತ್ರ, ಪುಸ್ತಕ ಎಲ್ಲವೂ ಕೂಡ,

ಅನಿಯಂತ್ರಿತ ಅಭಿವ್ಯಕ್ತಿಯಂತೆ, ಊಹಾ ಸ್ವಾತಂತ್ರ್ಯದಲ್ಲಿ ಅಸಮಾನ. ಇದುವರೆವಿಗೂ ಮುಚ್ಚಿಟ್ಟಿದ್ದ ಇಂಥ ಜೀವನದ ಸೈಕಿಕ್ (Psychic) ಅದ್ಭುತಗಳು ಯಾವುದೇ ಅತಿಮಾನಸ ಶಕ್ತಿಗೆ ಸೇರಬೇಕಾದ್ದಿಲ್ಲ. ಇವು ನಿಜವಾದ ಸಮಗ್ರ ವ್ಯಕ್ತಿತ್ವದ ವ್ಯಕ್ತಿಗಳಲ್ಲಿ ಕಂಡುಬರುವ ಸಹಜಶಕ್ತಿ. ಇಲ್ಲಿಂದ ಮುಂದೆ ಮ್ಯಾನಿಫೆಸ್ಟೋದ ಪ್ರಕಾರ ಸರ್‍ರಿಯಲಿಸಂನ ಅಂತಿಮ ಗುರಿ "ಕನಸು ಮತ್ತು ವಾಸ್ತವಿಕತೆ". ಒಂದಕ್ಕೊಂದು ತದ್ವಿರುದ್ಧ ಎಂಬಂತೆ ಕಾಣುವ ಈ ಎರಡೂ ಲೋಕಗಳು ಸಂಪೂರ್ಣ ವಾಸ್ತವಿಕತೆ ಅಥವಾ ಸರ್‍ರಿಯಲಿಸಂ ಆಗಿ ಸಮ್ಮಿಲನಗೊಳ್ಳುವುದು. ಎಚ್ಚರದ ಮನಸ್ಸಿನ ಅನುಭವಕ್ಕೆ ಸದಾಕಾಲ ಬರುವ ಅರ್ಥರಹಿತ ಭಾವನೆಗಳು ಮತ್ತು ಚಿತ್ರಗಳು (ಗೋಚರಕ್ಕೆ ಸಿಕ್ಕುವ ನೈಜಲೋಕದ ಜಗತ್ತೆಲ್ಲ) ಕ್ರಿಯಾತ್ಮಕ ಅಭಿವ್ಯಕ್ತಿಗೆ ಸೂಕ್ತ ವಿಷಯಗಳು ಮತ್ತು ಅವೇ ಇದಕ್ಕೆ ಮೂಲ- ಎಂದು ನಿರ್ಧರಿಸಲಾಯಿತು. ಬ್ರೆಟನ್‌ನ ಸೌಂದರ್ಯದ ಸ್ಪಷ್ಟರೂಪತೆಯು ಈ ಭಾವನೆಗಳಿಂದಲೇಹುಟ್ಟಿದ್ದು. ಆತನ ಪ್ರಕಾರ "ಅದ್ಭುತವಾದದ್ದು ಸದಾ ಸುಂದರವಾಗಿರುತ್ತದೆ, ಅದ್ಭುತವಾದ ಯಾವುದೇ ವಸ್ತು ಸುಂದರವಾಗಿರುತ್ತದೆ".

ಮ್ಯಾನಫೆಸ್ಟೋದಲ್ಲಿ ಚಿತ್ರಕಲೆಯನ್ನು ಉಪೇಕ್ಷಿಸಿದ್ದರೂ ಕೂಡ, 1924ರಲ್ಲೇ ಸರ್‍ರಿಯಲಿಸ್ಟ್ ಕಲೆ ಅಸ್ತಿತ್ವದಲ್ಲಿತ್ತು. 1923-24ರ ಚಳಿಗಾಲದಲ್ಲಿ ಆ್ಯಂಡ್ರೆ ಮ್ಯಾಸನ್, ಬ್ರೆಟನ್‌ನನ್ನು ಸ್ವಲ್ಪ ಹಿಂದೆ ಭೇಟಿ ಮಾಡಿದ್ದು, ಆತನ ಪ್ರಯೋಗಗಳ ಬಗ್ಗೆ ತಿಳಿದುಕೊಂಡಿದ್ದರಿಂದ, ತನ್ನ ಮೊದಲ 'ಆಟೋಮ್ಯಾಟಿಕ್' (automatic) ಚಿತ್ರಗಳನ್ನು ರಚಿಸಿದ. ಹಾಳೆಯ ಮೇಲೆ ತನ್ನ ಲೇಖನಿಯನ್ನು ಯಾವ ನಿಯಂತ್ರಣವೂ ಇಲ್ಲದೆ ಹರಿಯಬಿಟ್ಟು, ವಿಷಯ ಮತ್ತು ರಚನೆಗಳ ಪದ್ಧತಿಯಿಂದ ಮುಕ್ತನಾಗಿ, ತನ್ನ ಮನಸ್ಸಿನ ಅಂತರಾಳದಲ್ಲಿ ಹುದುಗಿದ್ದ ಅದ್ಭುತ ಚಿತ್ರಗಳಿಗೆ ಆತ ಬಿಡುಗಡೆ ನೀಡಿದ. ಅವನ ಈ ಆಟೋಮ್ಯಾಟಿಕ್ ಚಿತ್ರಗಳು, ಈ ರೀತಿಯಲ್ಲಿ ಮನಸ್ಸಿಗೆ ಸಮಾನವಾದ ದೃಶ್ಯರೂಪಗಳಾದವು.

ಚಿರಿಕೊ ರಚಿಸಿದ 'ವುಮನ್', 'ಜಲ್ಡ್‌ಮ್ಯಾನ್' ಮತ್ತು 'ಫ್ಲವರ್' (1923) ಎಂಬ ಚಿತ್ರಗಳು ಅವನ ಕನಸುಗಳ ಮತ್ತು ಫ್ಯಾಂಟಸಿಗಳ ವಿವರಣಾತ್ಮಕ ಸತ್ಯರೂಪಗಳು. ನಂತರ ಸರ್‍ರಿಯಲಿಸ್ಟ್ ಚಿತ್ರ 1923-24ರಷ್ಟು ಹಿಂದೆಯೇ, ಮ್ಯಾಸನ್ ಮತ್ತು ಅರ್ನೆಸ್ಟ್ ವಿವರಿಸಿದ ಹಾಗೆ, ಎರಡು ರೀತಿಯಲ್ಲಿ ವಿಂಗಡಗೊಂಡವು:

1) ಹೆಚ್ಚು ಅಮೂರ್ತವಾದ, ತಡೆರಹಿತವಾಗಿ ಹೊರಬಂದ ಆಟೋಮ್ಯಾಟಿಕ್ ಚಿತ್ರಗಳು.



ಜೆ. ಎಂ. ಎಸ್. ಮಣಿ



ಬಿಕಾಸ್ ಭಟ್ಟಾಚಾರ್ಜಿ



ಸಾಂಪ್ರದಾಯಿಕ ಚಿತ್ರಕಲೆಯಲ್ಲಿ ಸರ್ರಿಯಲಿಸಂ ಅಂಶಗಳು



ಮಗ್ರೇಟ್



ಅನಿಲ್ ಕಿರಣಜಿ



ಮನುಪರೇಖ್

ಸರ್ರಿಯಲಿಸಂ

2) ಭ್ರಮಾಧೀನವಾದ, ಜಾಗರೂಕವಾಗಿ ರಚಿತಗೊಂಡ ಅರ್ಥರಹಿತ ಕನಸಿನ ರೂಪಗಳು, ಅತಿ ಅದ್ಭುತವಾದ ಆಕಾರಗಳಿಂದ ಕೂಡಿದ, ಅತಿ ಸೂಕ್ಷ್ಮ ವಿವರಗಳಿಂದ ತುಂಬಿದ ಹಲವು ಚಿತ್ರಗಳ ಮೂಲಕ ಜಾನ್ ಮಿರೊ 1923ರಲ್ಲಿ ಸರ್‍ರಿಯಲಿಸಂಗೆ ಬದಲುಗೊಂಡ. ಶೈಲಿಯ ದೃಷ್ಟಿಯಿಂದ ಅವನ ಚಿತ್ರಗಳು ಮೇಲೆ ತಿಳಿಸಿದ ಎರಡೂ ರೀತಿಗಳಲ್ಲಿವೆ.

ಮೊದಲ ಮ್ಯಾನಿಫೆಸ್ಟೊದಲ್ಲಿ ಆಟ್ಯೊಮ್ಯಾಟಿಸಂಗೆ ಕೊಟ್ಟ ಪ್ರಾಮುಖ್ಯತೆಯು, ಸರ್‍ರಿಯಲಿಸಂ - ಚಿತ್ರಕಲೆಯ ಮೇಲೆ ಮುಂದಿನ ಕೆಲವು ವರ್ಷಗಳಲ್ಲಿ ತುಂಬಾ ಆಳವಾದ ಪರಿಣಾಮ ಬೀರಿದವು. ಮೇಸನ್‌ನ ರೇಖಾಚಿತ್ರಗಳ ಮುಕ್ತ ರೇಖೆಗಳು ಆತನ ತೈಲ ಚಿತ್ರಗಳ ಮುಕ್ತರೂಪದ ರೂಪುರೇಶೆಗಳನ್ನೂ ಒಳಗೊಂಡಿದ್ದವು. ಆದರೆ ತೈಲಚಿತ್ರಗಳ ಮುಕ್ತರೂಪದ ರೂಪುರೇಶೆಗಳನ್ನು ಸಂಕ ಒಳಗೊಂಡಿದ್ದವು. ಆದರೆ ಅವುಗಳ ಪೂರ್ಣತೆಯಲ್ಲಿ ಪ್ರಯತ್ನವ ಅಂಶ ಸ್ಪಷ್ಟವಾಗಿದೆ. ಆಟೋಮ್ಯಾಟಿಸಂ ಚಿತ್ರಗಳ ರಚನೆಯನ್ನು ಮುಂದುವರೆಸಲು (1927ರಲ್ಲಿ) ಆತ ಮರಳು ಚಿತ್ರಗಳ ಸರಣಿಯನ್ನು ಪ್ರಾರಂಭಿಸಿದ. ಉದಾಹರಣೆಗೆ: ಮೀನುಗಳ ಯುದ್ಧ. ಈ ಚಿತ್ರ ಕ್ಯಾನ್ವಾಸ್ ಮೇಲೆ ಅಂಟನ್ನು ಅಲ್ಲಿ, ಇಲ್ಲಿ ಬಳಿದು, ಅದರ ಮೇಲೆ ಕೈ ತುಂಬಾ ಮರಳನ್ನು ಎಸೆದು, ಅದಕ್ಕೊಂದು ರೂಪ ಮತ್ತು ಚೌಕಟ್ಟನ್ನು ಕೊಡಲಾಗಿದ್ದು, ನಂತರ ಅದಕ್ಕೆ ಬಣ್ಣ ಮತ್ತು ರೇಖೆಗಳನ್ನು ಅನಿರ್ಬಂಧಿತವಾಗಿ ರಚಿಸಲಾಗಿದೆ.

1925ರಲ್ಲಿ ಅರ್ನೆಸ್ಟ್ ಹೊಸ ಆಟೋಮ್ಯಾಟಿಕ್ ವಿಧಾನಗಳನ್ನು ಮುಂದುವರೆಸಿದ. ಉಜ್ಜುವಿಕೆಯಿಂದ ರೇಖಾಚಿತ್ರಗಳು ಮತ್ತು ಕೆರೆತದಿಂದ ಚಿತ್ರಕಲೆಯನ್ನು ರಚಿಸಿದ. ಮಕ್ಕಳು ನಾಣ್ಯಗಳ ಮೇಲೆ ಹಾಳೆಯನ್ನು ಇಟ್ಟು ಉಜ್ಜುವ ರೀತಿಯಲ್ಲೇ ಆತ ಮರ, ಎಲೆಗಳು ಮತ್ತಿತರ ಹಲವಾರು ವಸ್ತುಗಳನ್ನು ಉಜ್ಜುವಿಕೆಗೆ ಉಪಯೋಗಿಸಿ, ಅವುಗಳನ್ನು ಸೂಕ್ಷ್ಮವಾದ ಮತ್ತು ಹಲವು ಭಾವನೆಗಳನ್ನು ಹೊಮ್ಮಿಸುವ ಹಕ್ಕಿಗಳ, ಮರಗಳ, ಹಾರುವ ರಾಕ್ಷಸರ ಮತ್ತಿತರ ಚಿತ್ರಗಳಾಗುವಂತೆ ಜೋಡಿಸಿದ. 1926ರಲ್ಲಿ ಆತನ ಉಜ್ಜು ಚಿತ್ರಗಳು 'ಹಿಸ್ಟರಿ ನ್ಯಾಚುರೆಲ್' ಎನ್ನುವ ಹೆಸರಿನ ಪುಸ್ತಕದಲ್ಲಿ ಪ್ರಕಟವಾದವು. ಆತನ ಕೆರೆತದ (Graping) ಚಿತ್ರಗಳಾದ-ಡೋವ್ಸ್, ಹೋರ್ಡ್ಸ್, ಫಾರೆಸ್ಟ್ಸ್, ಸ್ನೋ ಫ್ಲವರ್ಸ್ ಮುಂತಾದುವು (1925-28) ಅವನ ಹಿಂದಿನ ಭ್ರಾಂತಿಯ ಚಿತ್ರಗಳಿಗೆ ಹೋಲಿಸಿದರೆ ಅತ್ಯಂತ ಭಿನ್ನವಾಗಿವೆ. ಈ ವಿಧಾನದಲ್ಲಿ ಕ್ಯಾನ್ವಾಸ್ ಮೇಲೆ ಒಂದರ ಮೇಲೆ ಒಂದರಂತೆ ಬಣ್ಣಗಳನ್ನು ಹಲವಾರು ಬಾರಿ ಬಳಿಯಲಾಗುತ್ತದೆ. ನಂತರ, ಅದರ ಬಳಿ ಕೆಲವು ವಸ್ತುಗಳನ್ನಿಟ್ಟು, ಉಬ್ಬಿದ ಭಾಗಗಳನ್ನು ಕೆರೆಯಲಾಗುತ್ತದೆ. ಮುಂದೆ ಅದರಲ್ಲಿ ಹೊಮ್ಮುವ ರೂಪಗಳನ್ನು ಅರ್ಥೈಸಲಾಗುತ್ತದೆ.

1925ರ ಮಿರೊನ ಹಲವಾರು ಚಿತ್ರಗಳು ಅತ್ಯಂತ ವೇಗವಾಗಿ ಮತ್ತು ಮುಕ್ತವಾಗಿ ರಚಿಸಲ್ಪಟ್ಟ 'ಆಟೋಮ್ಯಾಟಿಕ್' ಚಿತ್ರಗಳಾಗಿವೆ. ಉದಾಹರಣೆಗೆ 'ದಿ ಬರ್ತ್ ಆಫ್ ದಿ ವರ್ಲ್ಡ್' ಚಿತ್ರ ಅತ್ಯಂತ ಅಮೂರ್ತವಾಗಿರುವ ಈ ಸರಣಿ ಚಿತ್ರಗಳು ತಮ್ಮ ಕಾವ್ಯಮಯ ಶೀರ್ಷಿಕೆಗಳಿಂದ ನೈಜ ಜಗತ್ತಿನ ನೆನಪನ್ನು ತರುತ್ತವೆ. 1923ರಲ್ಲಿ ಕಲೆಯ ಮಾರಾಟದ ಅಂಗಡಿಯೊಂದರ ಕಿಟಕಿಯಲ್ಲಿ ಡಿ ಚಿರಿಕೋನ ಚಿತ್ರವೊಂದನ್ನು ನೋಡಿ, ತಕ್ಷಣ ಪ್ರಭಾವಿತನಾಗಿ ಯೂಸ್ ಟಂಗ್ವೆ(Yves Tanguy) ಚಿತ್ರಕಾರನಾಗಲು ನಿರ್ಧರಿಸಿದ. ಆತನ ಮೊದಲ ಚಿತ್ರಗಳು ಡಿ ಚಿರಿಕೋನ ಮನಸ್ಸು ಕಾಡುವ ದೃಶ್ಯಗಳನ್ನು ನೆನಪಿಗೆ ತಂದರೂ ಕೂಡ, ಅವುಗಳ ಒಗಟಿನಂತಹ ಅಮೂರ್ತತೆ ಮತ್ತು ಬಯೋಮಾರ್ಫಿಕ್ ರೂಪಗಳಿಂದಾಗಿ, ಆ ಚಿತ್ರಗಳ ಮೇಲೆ ಮಿರೋ ಮತ್ತು ಆರ್ಪ್‌ರ್ ಪ್ರಭಾವವನ್ನು ಕಾಣಬಹುದು.

ಸರ್‍ರಿಯಲಿಸ್ಟ್ ಚಿತ್ರಕಾರರು ಸಾಮೂಹಿಕ ಚಟುವಟಿಕೆಯಲ್ಲಿ ಮತ್ತು ಪ್ರತಿಯೊಬ್ಬನೂ ಚಿತ್ರರಚಿಸಬೇಕು ಎನ್ನುವುದರ ಬಗ್ಗೆ ಆಸಕ್ತಿ ತೋರಿದರು. ಇದರ ಪರಿಣಾಮವೇ "ಕ್ಯಾಡವರ್ ಎಕ್ಸ್‌ವಿಸ್" (Cadavire Exquis ಅಥವಾ Exquisite corpse) ಎಂಬ ಒಂದು ರೀತಿಯ ಆಟ. ಒಂದು ವಾಕ್ಯ ಅಥವಾ ಚಿತ್ರವನ್ನು ಮೂರು ಅಥವಾ ನಾಲ್ಕು ಜನರಿಂದ ರಚಿತವಾಗುತ್ತಿತ್ತು. ಒಬ್ಬರ ನಂತರ ಒಬ್ಬರು, ಹಿಂದಿನವರ ರಚನೆಯ ಅರಿವಿಲ್ಲದೆ, ಇವುಗಳನ್ನು ಮುಂದುವರೆಸುತ್ತಿದ್ದರು. ಇದರ ಪರಿಣಾಮವಾಗಿ ಅತ್ಯಂತ ಅದ್ಭುತ ಕಲ್ಪನೆಗಳು ಸೃಷ್ಟಿಯಾದವು. ಇವು ನಿಸ್ಸಂಶಯವಾಗಿಯೂ ಸರ್‍ರಿಯಲಿಸ್ಟರ ಸೌಂದರ್ಯೋಪಾಸನೆಯ ಸೂತ್ರಗಳನ್ನು ಸಂಪೂರ್ಣವಾಗಿ ಅರ್ಥೈಸಿದ್ದವು. ಸರ್‍ರಿಯಲಿಸ್ಟರ ಧ್ಯೇಯ ಚಿತ್ರಣ-ಕಾವ್ಯವಾಗಿತ್ತು. ಕವಿಗಳು ಮತ್ತು ಕಲಾವಿದರು ಜೊತೆಗೂಡಿ ರಚಿಸಿದ 'ಎಕ್ಸ್‌ಕ್ವಿಸಿಟ್ ಕ್ಯಾಪ್ಸ್'(Exquisite Corpse)ನಲ್ಲಿ ಈ ಧ್ಯೇಯವನ್ನು ಕಾಣಬಹುದು. ಸ್ಪಷ್ಟ ಚಿತ್ರಗುಣಗಳುಳ್ಳ ಸರ್‍ರಿಯಲಿಸ್ಟ್ ಕವನಗಳಲ್ಲಿ ಚಿತ್ರಗಳಿಗೆ ಅರ್ಥಗರ್ಭಿತ ಕಾವ್ಯಮಯ ಶೀರ್ಷಿಕೆಗಳನ್ನು ಕೊಟ್ಟ ಎಲ್ಲ ಕಲಾವಿದರಲ್ಲಿ, ಅರ್ನೆಸ್ಟ್ ಮತ್ತು ಮಿರೊನ ಕೆಲವು ಚಿತ್ರಗಳಲ್ಲಿ ಅವರು ಅಳವಡಿಸಿರುವ ಪದಗಳಲ್ಲಿ ಮತ್ತು ನುಡಿಗಟ್ಟುಗಳಲ್ಲಿ ಮತ್ತು ಚಿತ್ರಕಾರರು ತಮ್ಮ ಚಿತ್ರಗಳಲ್ಲಿ ತೋರುತ್ತಿದ್ದ ಪ್ರಾಸ್ತಾವಿಕ ಮತ್ತು ರೂಪಾಂತರ ಗುಣಗಳಲ್ಲಿ ಕೂಡ ಸರ್‍ರಿಯಲಿಸ್ಟರ ಧ್ಯೇಯವನ್ನು ಕಾಣಬಹುದು.

1928-29ರ ಸಮಯದಲ್ಲಿ ಡಿ ಚಿರಿಕೊ ಮತ್ತು 1920ರ ಆರಂಭದಲ್ಲಿ ಅರ್ನೆಸ್ಟ್, ಆಟೋಮ್ಯಾಟಿಕ್ ಚಿತ್ರರಚನಾ ವಿಧಾನವನ್ನು ಬಿಟ್ಟು, ಇಲ್ಯೂಷನಿಸ್ಟಿಕ್

ಭ್ರಮಾತ್ಮಕ ಚಿತ್ರಗಳನ್ನು ರಚಿಸತೊಡಗಿದರು. ಇದಕ್ಕೆ ಕಾರಣ ಬ್ರೆಟನ್‌ನ ಎರಡನೆಯ ಸರ್ರಿಯಲಿಸ್ಟ್ ಮ್ಯಾನಿಫೆಸ್ಟೊ. ಆತನ ಪ್ರಕಾರ ಆಟೋಮ್ಯಾಟಿಕ್ ಚಿತ್ರಗಳು ಕೇವಲ ಸೌಂದರ್ಯಪೂರ್ಣ ಚಿತ್ರಗಳ ಇಳಿದು ಬಿಡುವ ಬರುವ ಅಪಾಯವಿತ್ತು. ಕನಸುಗಳು, ಫ್ಯಾಂಟಸಿಗಳು ಮತ್ತು ಸರ್ರಿಯಲಿಸ್ಟ್ ಕಲ್ಪನೆಗಳನ್ನು ನೇರವಾಗಿ ಸ್ಪಷ್ಟವಾಗಿ, 'ಇಲ್ಯೂಷನಿಸ್ಟಿಕ್ ವಿವರಣೆಯ' ಮೂಲಕ ತೋರಿಸಬಹುದು ಎಂಬ ಅಭಿಪ್ರಾಯ ಆಗ ಬಂದಿತ್ತು. ಮಿರೊ ಕೂಡ ವಿವರಣಾತ್ಮಕವಾದ ಮತ್ತು ರೇಖಾ ಮಾದರಿಯ ಚಿತ್ರಗಳನ್ನು ರಚಿಸತೊಡಗಿದ. ಅವುಗಳಲ್ಲಿ ಮೊದಲಿನ ಅನಿರ್ಬಂಧಿತ ಭಾವನೆಗಳು ಇದ್ದರೂ ಕೂಡ, ಅವು ಘಟನೆಗಳಿಂದ ತುಂಬಿದ್ದವು. ಉದಾಹರಣೆ: 'ಮಲದ ರಾಶಿಯ ಮುಂದೆ ಗಂಡು ಮತ್ತು ಹೆಣ್ಣು' (Man and woman in front of a pile of excrement) ಎಂಬ ಚಿತ್ರದಲ್ಲಿ ಅಸ್ವಸ್ಥತೆಯ ಜಂಜಾಟ, ಹಿಂಸೆ, ರತಿಕಾಮನೆ ಮತ್ತು ಹಾಸ್ಯ ತುಂಬಿಕೊಂಡಿವೆ.

ಮ್ಯಾಕ್ಸ್ ಅರ್ನೆಸ್ಟ್‌ನ(Max Ernst) ಚಿತ್ರಗಳೂ ಕೂಡ ಹೆಚ್ಚು ಸೃಷ್ಟಿಗೊಳ್ಳುತ್ತಾ ಬಂದಿತು. 1929ರಲ್ಲಿ ಆತನ 'ಕೊಲಾಜ್-ಕಾದಂಬರಿ'ಗಳ ಮೊದಲ ಕೃತಿ ಪ್ರಕಟವಾಯಿತು. ಅದರ ಹೆಸರು 'ನೂರು ತಲೆಗಳ ಹೆಂಗಸರು'(The 100-Headed Women). ಈ ಚಿತ್ರಗಳು ಜನಪ್ರಿಯ ಪತ್ರಿಕೆಗಳಲ್ಲಿ ಪ್ರಕಟವಾದ ಚಿತ್ರಗಳನ್ನೂ ಕತ್ತರಿಸಿ ಮಾಡಿದ್ದವಾಗಿದ್ದವು. ಆತ ಈ ಚಿತ್ರಗಳನ್ನು ಅತಿ ಅಪೂರ್ವ ರೀತಿಯಲ್ಲಿ ಜೋಡಿಸಿ ಅದ್ಭುತ, ತಳಮಳಗೊಳ್ಳುವ ಅಥವಾ ಹಾಸ್ಯದೃಶ್ಯಗಳನ್ನಾಗಿ ಪರಿವರ್ತಿಸಿದ. ಟಂಗ್ಯೈ(Tanguy)ನ ಮೊದಲ ಚಿತ್ರಗಳಲ್ಲಿನ ಬೈಯೋಮಾರ್ಫಿಸಮ್ (Biomorphism) ಮುಂದುವರಿದು ಇನ್ನೂ ಅಸ್ಪಷ್ಟವಾಗಿದ್ದುದರ ಜೊತೆಗೆ ಹೊರ ಜಗತ್ತಿನ ಯಾವುದೇ ಕುರುಹು ಇಲ್ಲದಂತೆ ಅಳಿಸಿ ಹಾಕಲ್ಪಟ್ಟವು. ಆದರೂ 1929ರ ನಂತರದ ಆತನ ಕೃತಿಗಳಲ್ಲಿ ಹೆಚ್ಚು ಸ್ಪಷ್ಟತೆ ಮತ್ತು ಹೆಚ್ಚಿನ ಶ್ರಮವನ್ನು ಕಾಣಬಹುದು. ಕೊನೆಯೇ ಇಲ್ಲ ಎನ್ನುವಷ್ಟು ವೈಶಾಲ್ಯವನ್ನು ಕಾಣುವ ಅವನ ಚಿತ್ರಗಳಲ್ಲಿ ಬೈಯೋಮಾರ್ಫಿಕ್ ರೂಪಗಳು ತುಂಬಿಕೊಂಡಿದ್ದವು. ಈ ರೂಪಗಳು ಹೆಚ್ಚು ಸ್ಪಷ್ಟವಾಗಿ ತ್ರಿ-ಪ್ರಮಾಣ ರೂಪವನ್ನು ಪಡೆದವು. ತನ್ನ ಊಹಾ ಅಥವಾ ಕನಸಿನ ಲೋಕದ ಪ್ರತಿಕೃತಿಗಳೇ ಎಂಬಂತೆ ಆ ಚಿತ್ರಗಳಿದ್ದವು.

1927ರಲ್ಲಿ ರೀನ್ ಮ್ಯಾಗ್ರಿಟ್(Rene Magritte) ಪ್ಯಾರಿಸ್‌ಗೆ ಬಂದು ನೆಲೆಸಿದ. ಆತ ಬ್ರಸಲ್ಸ್‌ನ ಸರ್ರಿಯಲಿಸ್ಟ್ ತಂಡದ ಸ್ಥಾಪಕ ಸದಸ್ಯರಲ್ಲಿ ಒಬ್ಬನಾಗಿದ್ದ. ಆತನ ಚಿತ್ರಗಳೆಲ್ಲ ನಿಖರ ಸ್ಪಷ್ಟ ನೈಜ ಶೈಲಿಯಲ್ಲಿವೆ. ಆತನು ಚಿತ್ರಿಸಿದ ಘಟನೆಗಳಲ್ಲಿನ ಮನೋಭಾವ ಮತ್ತು ಬಾಹ್ಯ ವಿಷಯಗಳಿಗೆ ಆಘಾತ ಮತ್ತು

ತಲ್ಲಣವನ್ನು ತರುತ್ತವೆ. ಉದಾಹರಣೆಗೆ 'ಪ್ರೇಮಿಗಳು'(1928) ಎಂಬ ಕೃತಿಯಲ್ಲಿ ಒಂದು ಗಂಡು ಮತ್ತು ಒಂದು ಹೆಣ್ಣು ಒಬ್ಬರನ್ನೊಬ್ಬರು ಚುಂಬಿಸುತ್ತಿದ್ದಾರೆ. ಆದರೆ ಅವರ ತಲೆಗಳು ಬಟ್ಟೆಗಳಿಂದ ಸುತ್ತಲ್ಪಟ್ಟಿವೆ. ತನ್ನ ಹಲವಾರು ಚಿತ್ರಗಳಲ್ಲಿ ಅವನು ಪ್ರಕೃತಿಯ ಬಗ್ಗೆ ನಮಗೆ ಇರುವ ಅರಿವನ್ನು ಪ್ರಶ್ನಿಸುತ್ತಾನೆ. ಆತನ ಪ್ರಕಾರ ಅರಾಜಕತೆಯ ಶಕ್ತಿಗಳು ಗೌಪ್ಯವಾಗಿ ಸೃಷ್ಟಿಯನ್ನು ನಿಯಂತ್ರಿಸುತ್ತವೆ. ಉದಾಹರಣೆಗೆ: ಭಾಷೆಯ ಮೇಲಿನ ನಮ್ಮ ನಂಬಿಕೆಯನ್ನು ಮತ್ತು "ಕಲೆ ಸೃಷ್ಟಿಯನ್ನು ಅನುಕರಿಸುತ್ತದೆ" ಎಂಬ ಹೇಳಿಕೆಯನ್ನು ಆತ ತನ್ನ 'ಟ್ರೀಸನ್ ಆಫ್ ಇಮೇಜಸ್'(Treason of Images) (1929)ನಲ್ಲಿ ಬಲವಾಗಿ ಪ್ರಶ್ನಿಸುತ್ತಾನೆ. ಅದರಲ್ಲಿ ಪೈಪ್‌ನ ನಕಲು ಚಿತ್ರದ ಕೆಳಗೆ ಈ ಬರಹ ಇದೆ: "ಇದು ಪೈಪ್ ಅಲ್ಲ."

ಸಾಲ್ವಡಾರ್ ಡುಲಿ 1928ರ ಕೊನೆಯಲ್ಲಿ ತನ್ನ ಜೊತೆಗಾರ ಲೂಯಿ ಬನೆಲ್(Luis Bunuel) ನೊಡನೆ ಸರ್‍ರಿಯಲಿಸ್ಟ್ ಪ್ರೇರಿತ "ಎನ್ ಅಂಡಾಲುಸಿಯನ್ ಡಾಗ್' (An Andalusian Dog) ಎಂಬ ಚಲನಚಿತ್ರವನ್ನು ನಿರ್ಮಿಸುವ ಮೂಲಕ ಸರ್‍ರಿಯಲಿಸಂ ಲೋಕವನ್ನು ಪ್ರವೇಶಿಸಿದ. ಈ ಚಿತ್ರವನ್ನು ಪ್ಯಾರಿಸ್‌ನಲ್ಲಿ ಖಾಸಗಿಯಾಗಿ ಪ್ರದರ್ಶಿಸಲಾಯಿತು. 1928 ಮತ್ತು 1929ರಲ್ಲಿ ಸರ್‍ರಿಯಲಿಸಂ ಚಳುವಳಿಯುಲ್ಲಿ ಸಾಕಷ್ಟು ಆಂತರಿಕ ಸಮಸ್ಯೆಗಳು ಮತ್ತು ಘರ್ಷಣೆಗಳು ಕಾಣಿಸಿಕೊಂಡವು. ಇದಕ್ಕೆ ಎರಡು ಕಾರಣಗಳು. ಒಂದು ಕಮ್ಯೂನಿಸ್ಟ್ ಪಕ್ಷದೊಡನೆ ಸರ್‍ರಿಯಲಿಸಂ ಸಂಬಂಧ. ಎರಡು, ಸರ್‍ರಿಯಲಿಸ್ಟ್ ತತ್ವಗಳ ಬಗ್ಗೆ ಬ್ರೆತಾನ್ ತೋರುತ್ತಿದ್ದ ಸರ್ವಾಧಿಕಾರಿ ಮನೋಭಾವ. ಸರ್‍ರಿಯಲಿಸಂ ತತ್ವಗಳಿಂದ ಸರಿಯುತ್ತಿದ್ದವರನ್ನೂ ಉಚ್ಚಾಟಿಸಲೂ ಆತ ಹಿಂದೆ ಮುಂದೆ ನೋಡುತ್ತಿರಲಿಲ್ಲ. ಬ್ರೆತಾನ್ ಬಗ್ಗೆ ಇನ್ನೂ ಕೂಡ ನಂಬಿಕೆ ಇಟ್ಟವರು ಮತ್ತು ಡಾಲಿ. ಬ್ರೆಟನ್‌ಗೆ ಅವಶ್ಯವಾಗಿ ಬೇಕಾಗಿದ್ದ ಸೂಕ್ತ ಬೆಂಬಲವಾಗಿದ್ದರು. ಡಾಲಿಯ 'ದಿ ಲಗ್‌ಬ್ರಿಯಸ್ ಗೇಮ್' ಮತ್ತು Trompe- I'Deil - ಚಿತ್ರಗಳಲ್ಲಿನ ವಿಪರೀತ ಲೈಂಗಿಕ ದೃಶ್ಯಗಳು ಬ್ರೆಟನ್‌ನ ಸರ್‍ರಿಯಲಿಸ್ಟ್ ಗುರಿಯ ಪೂರ್ಣ ಪ್ರತೀಕಗಳಾಗಿದ್ದವು. ಬ್ರೆಟನ್ ತನ್ನ "ಎರಡನೇ ಸರ್‍ರಿಯಲ್ ಮ್ಯಾನಿಫೆಸ್ಟೋ"ದಲ್ಲಿ ಸರ್‍ರಿಯಲ್ ಗುರಿ ಏನು ಎಂದು ಹೀಗೆ ಹೇಳುತ್ತಾನೆ: "ನಮ್ಮೊಳಗೆ ನಾವು ಅದ್ಭುತವಾದ ರಮ್ಯತೆಯಿಂದ ಇಳಿಯುವ; ಮುಚ್ಚಿ ಅವಿತಿರುವ ಭಾಗಗಳ ಮೇಲೆ ವ್ಯವಸ್ಥಿತವಾಗಿ ಬೆಳಕನ್ನು ಚೆಲ್ಲುವ ಮತ್ತು ನಿರ್ಬಂಧಿತ ಪ್ರದೇಶಕ್ಕೆ ಸದಾ ಪ್ರವೇಶಿಸುವ ಮೂಲಕ ನಮ್ಮ ಸೈಕಿಕ್ (Psychic) ಶಕ್ತಿಯನ್ನು ಪುನಃ ಪಡೆಯುವುದು." ಡಾಲಿ ತನ್ನ "ಡಬಲ್ ಇಮೇಜಸ್" ಎಂದು ಕರೆದ. 1930ರ ದಶಕದಲ್ಲಿ ಪ್ರಭಾವಶಾಲಿಯಾದ ಈ

ಮಾದರಿ ಸರ್‍ರಿಯಲಿಸ್ಟ್ ಚಿತ್ರಕ್ಕೆ ಫ್ರಾಯ್ಡ್‌ನ ಕಲ್ಪನೆಗಳು ಲೇಪನ ಕೊಟ್ಟಿತು. ಆದರೆ ಫ್ಯಾಸಿಸಂ (Facism) ಬಗ್ಗೆ ಆತನಿಗಿದ್ದ ಕಳಕಳಿ ಮತ್ತು ಹಣಗಳಿಕೆಯಲ್ಲಿ ಅವನಿಗಿದ್ದ ಆಸಕ್ತಿಯಿಂದ, ಮುಂದೆ ಸರ್‍ರಿಯಲಿಸ್ಟ್ ಗುಂಪಿನಿಂದ ಹೊರಗೆ ಬರಬೇಕಾಯಿತು.

1929ರಲ್ಲಿ ಆಲ್ಬರ್ಟೊ ಗಿಯೊಕೊಮಿಟಿ (Giacometti) ಎಂಬ ಶಿಲ್ಪಿ ಸರ್‍ರಿಯಲಿಸಂ ಹಾದಿಯನ್ನು ತುಳಿಯತೊಡಗಿದ. ಮುಂದಿನ ಆರು ವರ್ಷ ಆತ ತನ್ನ ಊಹಾಲೋಕದ ಸಹಾಯದಿಂದಲೇ ಶಿಲ್ಪಗಳನ್ನು ರಚಿಸಿದ. ಪಂಜರದಂಥ ಆಕೃತಿಗಳು, ಅವುಗಳೊಳಗೆ ಕಷ್ಟ ಅರ್ಥದ ವಸ್ತುಗಳ, ಕರುಳಿನ ಆಕಾರದ ಪ್ಲಾಸ್ಟರನ ಕಾರಿಡಾರ್‌ಗಳ ಮಣೆ ಆಟಗಳನ್ನು ಹೋಲುವ ಜೀವಿಗಳ ಮೂಲಕ, ಅವನು ಭಯಕ್ಕೆ ವಿನಾಕಾರಣ ಶಿಕ್ಷೆಯ ಬಗ್ಗೆ ಮತ್ತು ತಲ್ಲಣಗೊಳಿಸುವ ಹಿಂಸೆಗಳಿಗೆ ಹೊರರೂಪಗಳನ್ನು ಕೊಟ್ಟ. ಮುಂದೆ ಸ್ವಲ್ಪ ಸಂಪ್ರದಾಯ ರೀತಿಯ ಸ್ತ್ರೀ ಶಿಲ್ಪಗಳಿಗೆ ಆತ ಮೋಹಿನಿಯ ಹೋಲಿಕೆಯನ್ನು ಕೊಟ್ಟಿರುವನು.

1930ರ ದಶಕದಲ್ಲಿ 'ವಸ್ತುಗಳನ್ನು ಮಾಡುವ' ಹೊಸ ಚಟುವಟಿಕೆಗಳಿಗೆ ಸರ್‍ರಿಯಲಿಸ್ಟರಲ್ಲಿ ಪ್ರಮುಖವಾಯಿತು. ಈ 'ವಸ್ತು'ಗಳನ್ನು ಮಾಡುವುದಕ್ಕೆ ಯಾವ ವಿಶೇಷ ಪರಿಣತಿ ಬೇಕಾಗಿರಲಿಲ್ಲ. 1924ರಷ್ಟೇ ಹಿಂದೆಯೇ ಬ್ರೆತನ್ "ಕನಸಿನಲ್ಲಿ ಮಾತ್ರ ಕಾಣಲು ಸಾಧ್ಯವಾಗುವಂತಹ ಕೆಲವು ವಸ್ತುಗಳನ್ನು ಸೃಷ್ಟಿಸಬೇಕೆಂದು ಕರೆಕೊಟ್ಟಿದ್ದ. ಆದರೆ ಬ್ರೆತನ್‌ನ ಆಸೆ ಪೂರೈಸಿದ್ದು ಮಾತ್ರ 1930-31ರಲ್ಲಿ. ಆಗ ಗಿಯಾಕೋಮೆಟಿ ವಸ್ತುಗಳನ್ನು ಹೋಲುವ ಶಿಲ್ಪಗಳನ್ನು ಮಾಡಿದ. ಡಾಲಿ ಕೂಡ "ಸಾಂಕೇತಿಕ ಕ್ರಿಯೆಯುಳ್ಳ ವಸ್ತುಗಳು" ಎನ್ನುವ ಕೃತಿಗಳನ್ನು ರಚಿಸಿದ. ವಸ್ತುಗಳನ್ನು ಅವುಗಳ ಉಪಯೋಗಗಳಿಂದ ಬಿಡುಗಡೆಗೊಳಿಸುವ ಉದ್ದೇಶದಿಂದ ಮತ್ತು "ಆಸೆಗಳನ್ನು ನಸ್ತುಗಳನ್ನಾಗಿ ಪರಿವರ್ತಿಸುವ" ಗುರಿಯಿಂದ ಈ 'ವಸ್ತು'ಗಳನ್ನು ಮಾಡಲಾಗುತ್ತಿತ್ತು. ಮನಸ್ಸನ್ನು ಆಕರ್ಷಿಸಿದ ಯಾವುದೇ ಪದಾರ್ಥದಿಂದ ಅಂತರ ಮನಸ್ಸಿನ ಕಾರ್ಯಾಚರಣೆಯಿಂದ ಈ ವಸ್ತುಗಳ ರಚನೆ ಆಗುತ್ತಿತ್ತು. ಕೆಲವು ಬಾರಿ ವಿಪರೀತ ವಿವರಣಾತ್ಮಕವಾದ, ಕೆಲವೊಮ್ಮೆ ಕಾವ್ಯವನ್ನು ಉಪಯೋಗಿಸಿಕೊಂಡ (ಉದಾಹರಣೆಗೆ ಬ್ರೆಟನ್‌ನ ಕವನ ವಸ್ತುಗಳು) ಈ ವಸ್ತುಗಳು ಸರ್‍ರಿಯಲಿಸ್ಟರ ವೈಯಕ್ತಿಕ ಶ್ರದ್ಧಾ ದೈವಗಳಾಗಿದ್ದವು. ಮೆರಿಟ್ ಆ ಪನ್ ಹೀಮ್ (Merit Oppenheim)ನ "ಫರ್ ಕವರ್ಡ್ ಕಪ್, ಸಾಸರ್ ಅಂಡ್ ಸ್ಪೂನ್" ಅವುಗಳಲ್ಲಿ ಅತ್ಯಂತ ಪ್ರಮುಖವಾದ ಕೃತಿಗಳಲ್ಲಿ ಒಂದು. ಈ ವಿಶೇಷ ವಸ್ತುಗಳ ಶೋಧನೆ ಆಯ್ಕೆ ಮತ್ತು ಅವುಗಳ ತಯಾರಿಕೆ 1936ರಲ್ಲಿ ಪ್ಯಾರಿಸ್‌ನ 'ಗ್ಯಾಲರಿ ಚಾರ್ಲ್ಸ್

ರ್‍ಯಾಟನ್‌ನಲ್ಲಿ ನಡೆದ "ಸರ್ರಿಯಲಿಸ್ಟ್ ವಸ್ತುಗಳ ಪ್ರದರ್ಶನ"ದ ಮೂಲಕ ತನ್ನ ಅತ್ಯುನ್ನತ ಶಿಖರವನ್ನು ಮುಟ್ಟಿತು.

1920ರ ದಶಕದಲ್ಲಿ ಮೆರೆದು, ಸಾಕಷ್ಟು ಯಶಸ್ಸನ್ನು ಪಡೆದ ಸರ್ರಿಯಲಿಸಂ-ಅದರಲ್ಲೂ ಸರಿಯಲ್ ಚಿತ್ರಕಲೆ (ಹಲವಾರು ಅಂತರರಾಷ್ಟ್ರೀಯ ಪ್ರದರ್ಶನಗಳೇ ಇದಕ್ಕೆ ಮುಖ್ಯ ಕಾರಣ) 1930ರ ದಶಕದಲ್ಲಿ ತನ್ನ ಸಾಹಸ ಮತ್ತು ಧೈರ್ಯವನ್ನು ಕಳೆದುಕೊಳ್ಳಲಾರಂಭಿಸಿತು. ಹೊಸದಾಗಿ ಸರ್ರಿಯಲಿಸಂಗೆ ಸೇರ್ಪಡೆಯಾದವರು ಹಳಬರ ಸಮಾನರಾಗಿರಲಿಲ್ಲ. ವಿಕ್ಟರ್ ಬ್ರಾನರ್ ಎಂಬ ರುಮೇನಿಯಾ ದೇಶದವ 1932ರಲ್ಲಿ ಸರ್ರಿಯಲ್ ಗುಂಪನ್ನು ಸೇರಿದ. ಆತ ಆಕ್ರಮಣಕಾರಿ ರೀತಿಯ ಲೈಂಗಿಕ ದೃಶ್ಯಗಳ ರಾಕ್ಷಸ ರೀತಿಯ ಜನಗಳಿಂದ ತುಂಬಿದ ಭಯಾನಕ ಚಿತ್ರಗಳನ್ನು ರಚಿಸುವುದರ ಮೂಲಕ ಇಲ್ಯೂಷನಿಸ್ಟ್ ರೀತಿಯಲ್ಲಿ ತನ್ನದೇ ಆದ ಮೈಥಾಲಜಿಯನ್ನು ಸೃಷ್ಟಿಸಿದ.

1937 ಅಥವಾ 1938ರವರೆಗೆ ಜರ್ಮನ್ ಕಲಾವಿದ ಹ್ಯಾನ್ಸ್ ಬೆಲ್ಮರ್ ಪ್ಯಾರಿಸ್‌ಗೆ ಬರದೆ ಇದ್ದರೂ ಕೂಡ ಆತನ 'ಡಾಲ್'(Doll) ಕೃತಿಗಳು 1935ರಲ್ಲಿ 'ಮಿನಾಟರ್'ನಲ್ಲಿ ಪ್ರಕಟವಾದವು. ಪ್ರಚೋದಕ ಕೋನಗಳಿಂದ, ಲೈಂಗಿಕವಾಗಿ ಪ್ರಚೋದಕ ಭಂಗಿಗಳಿಂದ ತುಂಬಿದ ಆ ಚಿತ್ರದ ಹೆಣ್ಣಿನ ಅಂಗಾಂಗಗಳನ್ನು ಆತ ಅತ್ಯಂತ ಭಯಾನಕ, ವಿಚಿತ್ರ ರೀತಿಯಲ್ಲಿ ಪುನರ್‌ಜೋಡಣೆ ಮಾಡಿದ್ದ. ಬೆಲ್ಮರನ ಈ ಚಿತ್ರ ಸರ್ರಿಯಲಿಸಂಗೆ ಸ್ವಯಂ ಲೈಂಗಿಕ ಹಿಂಸೆಯ ಬಗ್ಗೆ ಇದ್ದ ಆಸಕ್ತಿಯ ಅದ್ಭುತ ಉಪಮೆಯಾಗಿದೆ, ಆಸ್ಕರ್ ಡಾ. ಮಿಂಗೆಜ್ (1906-57) ಹಲವಾರು ಗಮನ ಸೆಳೆಯುವ ವಸ್ತುಗಳನ್ನು ಸೃಷ್ಟಿಸಿದ. ಟೆನರಿಫ್‌ನ ಈತ 1936ರಲ್ಲಿ ಮಕ್ಕಳ ಕಲೆ 'ಡೆಕಲ್ ಕೊಮೇನಿಯ' (Decalcomania) ಮಾದರಿಯನ್ನು ಉಪಯೋಗಿಸಿದ. ಒಂದು ಹಾಳೆಯ ಮೇಲೆ ಬಣ್ಣವನ್ನು ಹರಡಿ, ಅದರ ಮೇಲೆ ಇನ್ನೊಂದು ಹಾಳೆಯನ್ನಿಟ್ಟು ಒತ್ತಿ, ಆ ಹಾಳೆಯನ್ನು ತೆಗೆದು ಆತ 'ಆಟೋಮ್ಯಾಟಿಕ್' ಆಗಿ ವಿಚಿತ್ರ ಪ್ರಕೃತಿ ಚಿತ್ರಗಳನ್ನು ಮತ್ತು ಅದ್ಭುತ ನೈಸರ್ಗಿಕ ವನ್ಯ ಸಂಪತ್ತನ್ನು ಸೃಷ್ಟಿಸಿದ. ಅರ್ನೆಸ್ಟ್ ಎರಡನೇ ಮಹಾಯುದ್ಧದ ಸಮಯದಲ್ಲಿ ಇದೇ ಮಾದರಿಯನ್ನು ಉಪಯೋಗಿಸಿ ಅದ್ಭುತ ಪರಿಣಾಮಕಾರಿ ಚಿತ್ರಗಳನ್ನು ಸೃಷ್ಟಿಸಿದ.

1937ರ ನಂತರ ಪಾಲ್‌ಡೆಲ್ವಾಕ್ಸ್ (Paul Delvaux) ಸರ್ರಿಯಲಿಸ್ಟ್ ಪ್ರೇರಿತ ಇಲ್ಯೂಷನಿಸ್ಟಿಕ್ ಚಿತ್ರಗಳನ್ನು ರಚಿಸಿದ. ಆತನ ಚಿತ್ರಗಳಲ್ಲಿ ಬಯಸುವ, ಆದರೆ ಹತ್ತಿರ ಹೋಗಲಾರದಂಥ ಬೆತ್ತಲೆ ಹೆಣ್ಣುಗಳು ಮತ್ತು ಹೆದರುವ ಅಪ್ರಯೋಜಕ

ಗಂಡಸರು ಇದ್ದಾರೆ. ಈ ಚಿತ್ರಗಳು ಈಡೇರದ ಲೈಂಗಿಕ ಬಯಕೆಗಳನ್ನು ಮತ್ತು ಅದುಮಿಟ್ಟ ಲೈಂಗಿಕತೆಯನ್ನು ಹೇಗೆ ತೋರುತ್ತವೆ ಎಂದರೆ ಅವು ಫ್ಯಾಂಟಸಿ ಮತ್ತು ಕದ್ದು ನೋಡುವ ಲೈಂಗಿಕ ಚಟುವಟಿಕೆಗಳಲ್ಲಿ ಮಾತ್ರ ಹೊರಕ್ಕೆ ಬರುವಂತಹುದು.

1939ರ ಮಹಾಯುದ್ಧದ ಪ್ರಾರಂಭದಿಂದ ಪ್ಯಾರಿಸ್‌ನ ಕಲಾ ಜಗತ್ತಿಗೆ ತೊಂದರೆಗಳಾಗಿ, ಸರ್‍ರಿಯಲಿಸ್ಟ್ ತಂಡದಲ್ಲಿ ಒಡಕು ಉಂಟಾಯಿತು. ಕೆಲವು ಸರ್‍ರಿಯಲಿಸ್ಟರು ನ್ಯೂಯಾರ್ಕ್‌ನಲ್ಲಿ ಆಶ್ರಯ ಪಡೆದು, ಬ್ರೆಟನ್ ಜೊತೆಗೂಡಿ ಹೊಸ ತಂಡವನ್ನು ಕಟ್ಟಿದರು. 1942ರಲ್ಲಿ ಸರ್‍ರಿಯಲಿಸಂಗೆ ಸಂಬಂಧಿಸಿದಂತೆ ವಿ.ವಿ.ವಿ.(V.V.V.) ಎಂಬ ಪತ್ರಿಕೆಯನ್ನು ಆರಂಭಿಸಿತು. ಬ್ರೆಟನ್ ಮತ್ತು ಅರ್ನೆಸ್ಟ್ ಈ ಪತ್ರಿಕೆಯ ಸಂಪಾದಕೀಯ ಸಲಹೆಗಾರರಾಗಿದ್ದರು. ರಾಬರ್ಟೋ ಮಟ್ಟಯಕಾರೆನ್ ಮತ್ತು ವಿಫ್ರೆಡೊ ಲ್ಯಾಮ್ ಆ ಸಮಯದಲ್ಲಿ ತಂಡವನ್ನು ಸೇರಿದವರಲ್ಲಿ ಪ್ರಮುಖರಾಗಿದ್ದರು. ಆಟೋಮ್ಯಾಟಿಸ್ಟ್ ಮಾದರಿಯಲ್ಲಿ ಶ್ರೀಮಂತ ಬಣ್ಣಗಳ ಮತ್ತು ಧ್ವನಿಯ ವೈರುಧ್ಯಗಳ ಮೂಲಕ ಮಾತ್ತ(Matta) ರೋಚಕ ಮತ್ತು ಕಾವ್ಯಾತ್ಮಕ ಚಿತ್ರಗಳನ್ನು ಕೆಲಕಾಲ ರಚಿಸಿದ. ನಂತರ ರೇಖೆಗಳನ್ನು ಉಪಯೋಗಿಸಿ ವೈಜ್ಞಾನಿಕ ಕಥೆಗಳಲ್ಲಿ ಬರುವಂತಹ ಪಾತ್ರಗಳನ್ನು ತನ್ನ ಕೃತಿಗಳಲ್ಲಿ ರಚಿಸಿದ. ಇದರ ಪರಿಣಾಮವಾಗಿ ಆ ಚಿತ್ರಗಳಲ್ಲಿ ಹೆಚ್ಚು ಒರಟುತನ ಕಾಣಿಸಿಕೊಂಡವು.

ಲ್ಯಾಮ್(Lam)ನ ಕೃತಿಗಳಲ್ಲಿ ಕ್ರಮಬದ್ಧತೆ ಮತ್ತು ಪಿಕಾಸೊ ಬಗ್ಗೆ ಆತನಿಗಿದ್ದ ತೀವ್ರ ಅಭಿಮಾನದ ಪ್ರೇರಣೆಯನ್ನು ಕಾಣಬಹುದು. ಆಫ್ರಿಕಾದ ಬುಡಕಟ್ಟು ಜನಾಂಗಗಳ ಶಿಲ್ಪಗಳ ಪರಿಣಾಮವನ್ನು ಅವನ ಕೃತಿಗಳಲ್ಲಿ ಕಾಣಬಹುದು. ಆದರೆ ಆತನ ರೂಪಗಳು ಉಷ್ಣವಲಯದ ದಟ್ಟ ಗಿಡಗಳ ನಡುವೆ ನಡೆಯುವ ಆದಿಕಾಲದ ಪ್ರಕ್ರಿಯೆಗಳನ್ನು ನೆನಪಿಗೆ ತರುತ್ತವೆ. ಇದೇ ಸಮಯದಲ್ಲಿ ಸರ್‍ರಿಯಲಿಸ್ಟ್ ಆಟೋಮ್ಯಾಟಿಸ್ಟ್ ಅಮೇರಿಕದ ಯುವ ಕಲಾವಿದರ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿತು. ಆರ್ಷಿಲ್‌ಗಾರ್ಕಿಗೆ (Arshile Gorky) ಬ್ರೆತಾನ್‌ನ ಸಂಪೂರ್ಣ ಬೆಂಬಲವಿತ್ತು ಸರ್‍ರಿಯಲಿಸ್ಟ್ ಮಾದರಿಗಳಿಗೆ ಮಿರೊ ಮತ್ತು ಮ್ಯಾಸನ್ ಕೃತಿಗಳಿಗೆ ಹಾಗೂ ಪಿಕಾಸೋವಿನಿಂದ ಪ್ರೇರಿತ ಸರ್‍ರಿಯಲ್ ಚಿತ್ರಗಳಿಗೆ ಇತರ ಕಲಾವಿದರಾದ ಮದರ್‌ವೆಲ್ (Mother well) ಡಿ ಕೂನಿಂಗ್ (De cooning) ಸ್ಟಿಲ್, ರೊತ್ಕೊ(Rothko) ಮತ್ತು ಪೋಲಾಕ್(Jackson pollock) ಅವರು ಬಹಳ ಋಣಿಗಳಾಗಿದ್ದರು.

ಈ ರೀತಿ ಅಬ್‌ಸ್ಟ್ರಾಕ್ಟ್ ಎಕ್ಸ್‌ಪ್ರೆಶನಿಸಂನ ಬೆಳವಣಿಗೆಯ ಮೇಲೆ ಸರ್‍ರಿಯಲಿಸಂನ ತಕ್ಷಣದ ಪ್ರೇರಣೆಯನ್ನು ಕಾಣಬಹುದು. ಯುದ್ಧ ಪ್ರಾರಂಭವಾದ ಮೇಲೆ ಜಿಯೋಮಿಟ್ರಿಕಲ್ ಅಬ್‌ಸ್ಟ್ರಾಕ್ಟ್‌ನ್ನು ವಿರೋಧಿಸಿದ ಕಲಾವಿದರು. ಅಬ್‌ಸ್ಟ್ರಾಕ್ಟ್ ಎಕ್ಸ್‌ಪ್ರೆಶನಿಸಂಗೆ ಹೆಚ್ಚು ಕಡಿಮೆ ಸಂಪೂರ್ಣ ಜವಾಬ್ದಾರರಾಗಿದ್ದರು. ಉದಾಹರಣೆಗೆ. ಬ್ರೆತನ್‌ನ ಸಹಾಯದಿಂದ 1948ರಲ್ಲಿ ಡ ಬಫೆ(Dubuffet) ಆರ್ಟ್ ಬ್ರಟ(Art Brut)ನ್ನು ಸೃಷ್ಟಿಸಿದ. 1920ರ ದಶಕದಲ್ಲಿ ಸರ್‍ರಿಯಲಿಸ್ಟರು ಪ್ರತಿಪಾದಿಸಿದ ಮಕ್ಕಳ ಮಾಸಿಕ ಅಸ್ವಸ್ಥರ, ಸ್ವಂತ ಕಲಿತವರ ಮತ್ತು ಆದಿ ಜನಾಂಗಗಳ ಕಲೆ-ವಿಷಯಗಳ ಕಡೆ ಆರ್ಟ್‌ಬ್ರಟ್ ಗಮನ ಹರಿಸಿತು.

ಈಗಿನ ಅಭಿರುಚಿಯ ಮೇಲೆ ಯೂರೋಪಿನ ಮತ್ತು ಇತರ ದೇಶಗಳ ಕಲೆಯಲ್ಲಿ ಅದ್ಭುತ ಮತ್ತು ರಹಸ್ಯಮಯ ಪರಂಪರೆಯ ಪ್ರಾಮುಖ್ಯತೆ ಸರ್‍ರಿಯಲಿಸ್ಟ್ ಸೌಂದರ್ಯದ ಕಲ್ಪನೆ ನಿಸ್ಸಂದೇಹವಾಗಿ ಅಪಾರ ಪರಿಣಾಮ ಬೀರಿದೆ. ಸರ್‍ರಿಯಲಿಸಂನ ರಾಜಕೀಯ, ಸಾಮಾಜಿಕ ಮತ್ತು ನೈತಿಕ ಧ್ಯೇಯಗಳು ಈಡೇರದೇ ಇರಬಹುದು. ಆದರೆ ಸರ್‍ರಿಯಲಿಸ್ಟ್ ಚಳುವಳಿ ಕನಿಷ್ಟ ಸಾಂಸ್ಕೃತಿಕವಾಗಿ ಮತ್ತು ಬೇರೆ ರೀತಿಯಲ್ಲಿ ನೋಡುವ ಹಾಗೂ ಯೋಚಿಸುವ ವಿಷಯಗಳ ಬಗ್ಗೆ ವಿಶಾಲವಾದ ಹಾಗೂ ಶ್ರೀಮಂತವಾದ ಧೋರಣೆಯನ್ನು ಬೆಳೆಸಲು ಸಹಾಯಕವಾಗಿದೆ.

ನಮ್ಮ ದೇಶದ ಪುರಾಣ ಕತೆಗಳಲ್ಲಿ ಬರುವ ಸ್ವರ್ಗ ನರಕಗಳ ಕಲ್ಪನೆ, ನರಸಿಂಹ, ಗಣಪ, ಮತ್ಸ್ಯಾವತಾರ ಹಾಗೂ ಯಕ್ಷ, ನಾಗ, ಕಿನ್ನರ, ಅಪ್ಸರೆ, ಮಾಂತ್ರಿಕ, ಭೂತ ಮುಂತಾದವು ಸರ್‍ರಿಯಲಿಸಂ ಕಲ್ಪನೆಗಳು. ಭಾರತದ ಸಮಕಾಲೀನ ಕಲೆಯಲ್ಲಿ ಲಕ್ಷ್ಮಣ ಪೈ, ಬಿಕಾಸ್ ಭಟ್ಟಾಚಾರ್‌ಜೀ, ಪರಮಜೀತ್‌ಸಿಂಗ್ ಮುಂತಾದವರು ಕೃತಿಗಳನ್ನು ರಚಿಸಿದ್ದಾರೆ. ಕರ್ನಾಟಕದಲ್ಲಿ ಚಂದ್ರನಾಥ್, ಸಿ. ಚಂದ್ರಶೇಖರ್, ಕೆ. ಆರ್. ಸುಬ್ಬಣ್ಣ, ಜೆ.ಎಂ.ಎಸ್. ಮಣಿ, ಚಿ. ಸು. ಕೃಷ್ಣಸೆಟ್ಟಿ, ಎನ್. ಮರಿಶಾಮಾಚಾರ್ ಮುಂತಾದವರು ಕೃತಿಗಳನ್ನು ರಚಿಸಿದ್ದಾರೆ.

ಇಂದು ಕಲೆ ಹಾಗೂ ಜನಸಾಮಾನ್ಯರ ನಡುವೆ ಭಾರೀ ಅಂತರವಿದೆ. ಇಂದಿನ ಸಮಕಾಲೀನ ಕಲೆಯು ಜನಸಾಮಾನ್ಯರಿಗೆ ಅರ್ಥವಾಗದಿರುವುದೇ ಇದಕ್ಕೆ ಕಾರಣ ಎಂದು ಹಲವರ ಅಭಿಪ್ರಾಯ. ದೃಶ್ಯ ಕಲೆಗಳನ್ನು ಆಸ್ವಾದಿಸುವ ದೃಷ್ಟಿಯಿಂದ ನಮ್ಮ ಸಾಮಾನ್ಯ ಶಿಕ್ಷಣದಲ್ಲೂ ಗಂಭೀರ ಪ್ರಯತ್ನಗಳು ನಡೆಯುತ್ತಿಲ್ಲ. ಅಂತೆಯೇ ಈ ಕೊರತೆಗಳನ್ನು ಸ್ವಲ್ಪವಾದರೂ ತುಂಬುವುದು ಈ ಜನಪ್ರಿಯ ಕಲಾಮಾಲಿಕೆಯ ಆಶಯ. ಹೀಗೆ ಸಾಮಾನ್ಯರಿಗೆ ದೃಶ್ಯಕಲೆಗಳ ಪ್ರಾಥಮಿಕ ಜ್ಞಾನ ಒದಗಿಸುವ ದೃಷ್ಟಿಯಿಂದಲೇ ಇದನ್ನು ರೂಪಿಸಲಾಗಿದೆ. ಇದರಲ್ಲಿ ದೃಶ್ಯಕಲೆಯ ತಾತ್ವಿಕ ಅಂಶಗಳು, ಮಾಧ್ಯಮಗಳು, ತಂತ್ರಗಳು, ಇತಿಹಾಸ, ಆಧುನಿಕ ಕಲಾ ಪಂಥಗಳು ಇತ್ಯಾದಿ ಹಲವು ವಿಷಯಗಳನ್ನು ಕುರಿತಂತಹ ಹೊತ್ತಿಗೆಗಳನ್ನು ತರುತ್ತಿದ್ದೇವೆ. ತನ್ಮೂಲಕ ದೃಶ್ಯಕಲೆಯನ್ನು ಆಸ್ವಾದಿಸುವ ದಿಸೆಯಲ್ಲಿ ಹೆಚ್ಚಿನ ಜನರು ತೊಡಗುತ್ತಾರೆಂಬ ಮಹತ್ವಾಕಾಂಕ್ಷೆ ಈ ಮಾಲಿಕೆಯದು. ಹೀಗೆ ಜನರನ್ನು 'ಸಹೃದಯ' ರನ್ನಾಗಿಸುವ ದಿಸೆಯಲ್ಲಿ ಇದೊಂದು ಪುಟ್ಟ ಪ್ರಯತ್ನ.

ಎಚ್. ಎ. ಅನಿಲಕುಮಾರ್
ಸಂಪಾದಕರು